1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:1829/2015

ಚಾಸಾ:3 ಪ್ರಾಸಾ:4

ದಿನಾಂಕ: 27.01.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಹೇಶ ಖಾರ್ವಿ |
| ತಂದೆಯ ಹೆಸರು | : | ದಾಸ ಖಾರ್ವಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ತಾಲೂಕು ಪಂಚಾಯಿತಿಯಲ್ಲಿ ಕೆಲಸ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸ.ಸ.ಅ.ರವರಿಂದ:**

2ನೇ ಆರೋಪಿ ನನ್ನ ಮಾವ, 3ನೇ ಆರೋಪಿ ಆತನ ಮಗ.

ದಿ: 29-03-2015 ರಂದು ಸುಮಾರು 12 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಇದ್ದಾಗ ನನ್ನ ತಂದೆಯಾದ ಚಾಸಾ-1 ರವರು ನಮ್ಮ ಅಜ್ಜಿಗೆ ಸೇರಿದ ತೋಟಕ್ಕೆ ಹೋಗಿದ್ದು 12-15ರ ಸಮಯದಲ್ಲಿ ಕೆಲವು ಹುಡುಗರು ಬಂದು ಅವರಿಗೂ ಆರೋಪಿತರಿಗೂ ಗಲಾಟೆಯಾಗುತ್ತಿರುವುದಾಗಿ ನನಗೆ ತಿಳಿಸಿರುತ್ತಾರೆ. ನಾನು ಹೋಗಿ ನೋಡಿದಾಗ ಚಾಸಾ-1 ರವರ ಎಡಗಣ್ಣಿನ ಹುಬ್ಬಿನ ಮೇಲೆ ರಕ್ತಗಾಯವಾಗಿದ್ದು, 2 ಮತ್ತು 3ನೇ ಆರೋಪಿತರು ಚಾಸಾ-1 ರವರಿಗೆ ಕೋಲಿನಿಂದ ಹಲ್ಲೆ ಮಾಡುತ್ತಿದ್ದರು. ನಾನು ಬಂದು ಕೂಗಿದಾಗ ಇಬ್ಬರೂ ಓಡಿ ಬಂದಿರುತ್ತಾರೆ. ಅನಂತರ ನಾನು ನನ್ನ ತಂದೆಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿರುತ್ತೇನೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿ ಮುಮಾ1ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:**

ಸದ್ರಿ ದಿನ ನಾನು ಮತ್ತು ಚಾಸಾ-1 ರವರು ಸೇರಿ 1ನೇ ಆರೋಪಿಗೆ ಹಲ್ಲೆ ಮಾಡಿರುವುದಾಗಿ ಕ್ರೈಂ ನಂಬ್ರ 97/2015 ರಂತೆ ಪ್ರಕರಣ ದಾಖಲಾಗಿದೆ ಎಂದರೆ ಸರಿ. ನಂತರ ನಾವು ಆರೋಪಿತರ ವಿರುದ್ದ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿ. ನಮ್ಮಿಂದ ಹಲ್ಲೆಯಾಗಿದೆ ಎಂದು 1ನೇ ಆರೋಪಿ

ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಚಾಸಾ-2 ನನ್ನ ತಾಯಿ, ಚಾಸಾ-4 ನನ್ನ ಸಂಬಂಧಿಕರು.

ನಮ್ಮ ಮನೆಯ ಸುತ್ತಮುತ್ತಲೂ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಜಾಗದ ಮೂಲ ಪಹಣಿ ರಾಮಚಂದ್ರ ಕಾಮತ್ ರವರ ಹೆಸರಿನಲ್ಲಿದೆ ಎಂದರೆ ಸರಿ. ಜಾಗದ ವಿಚಾರದಲ್ಲಿ ನಮ್ಮ ಮತ್ತು ಆರೋಪಿತರ ನಡುವೆ ತಕರಾರು ಇರುತ್ತದೆ ಎಂದರೆ ಸರಿ. ಸದ್ರಿ ಜಾಗದಲ್ಲಿ ಕಾಯಿ ತೆಗೆಯುವ ವಿಚಾರದಲ್ಲಿ ತಕರಾರು ಇರುತ್ತದೆ ಎಂದರೆ ಸರಿ. ನಮ್ಮ ಮನೆಯಿಂದ ಘಟನಾ ಸ್ಥಳ 150 ಹೆಜ್ಜೆ ದೂರದಲ್ಲಿರುತ್ತದೆ. ಗಲಾಟೆಯಾದ ವಿಚಾರವನ್ನು ನಮ್ಮ ಪರಿಚಯಸ್ಥರು ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಸುಮಾರು 40-50 ಜನರು ಇದ್ದರು.

ಸಾರ್ವಜನಿಕರು ನಿಂತು ನೋಡುತ್ತಿದ್ದರು. ಚಾಸಾ-1 ರವರನ್ನು ಕೇಳಿದಾಗ 1ನೇ ಆರೋಪಿ ಕೊಡಲಿಯಿಂದ ಹೊಡೆದಿರುವುದಾಗಿ ತಿಳಿಸಿರುತ್ತಾರೆ. ನಾನು ಹೋಗುವ ವೇಳೆಗೆ 2 ಮತ್ತು 3ನೇ ಆರೋಪಿತರು ಓಡಿ ಹೋಗಿರುತ್ತಾರೆ. ಚಾಸಾ-1 ರವರಿಗೆ ಪೆಟ್ಟಿನಿಂದ ಶರ್ಟ್ ಗೆ ರಕ್ತ ತಾಗಿರುತ್ತದೆ. 2 ಮತ್ತು 3ನೇ ಆರೋಪಿತರು ಮರದ ಸೊಂಟೆಯಿಂದ ಹೊಡೆಯುತ್ತಿದ್ದರು. ಅದರಿಂದ ಬಲಕೈಗೆ, ಎಡಕಾಲು, ಬಲ ಕಾಲು ಪೆಟ್ಟಾಗಿರುತ್ತದೆ. ನಾನು ಗಲಿಬಿಲಿಗೊಂಡು ಎಲ್ಲೆಲ್ಲಿ ಪೆಟ್ಟಾಗಿತ್ತು ಎಂದು ನೋಡಲಿಲ್ಲ. 2 ದೊಣ್ಣೆಯಿಂದ ಹಲ್ಲೆಯಾದ ವಿಚಾರವನ್ನು ಪೊಲೀಸರಿಗೆ ತಿಳಿಸಿರುತ್ತೇವೆ. ಅನಂತರ ದೊಣ್ಣೆ ಮತ್ತು ಕೊಡಲಿಯನ್ನು ಸ್ಥಳದಿಂದ ತೆಗೆದುಕೊಂಡು ಹೋಗಿರುತ್ತಾರೆ.

ಆಸ್ಪತ್ರೆಗೆ ರಿಕ್ಷಾ ದಲ್ಲಿ ಹೋಗಿರುತ್ತೇವೆ. ವೈದ್ಯರಿಗೆ ಗಾಯಗಳ ಹಿನ್ನೆಲೆಯನ್ನು ಚಾಸಾ-1 ರವರೇ ನೀಡಿರುತ್ತಾರೆ. 1 ವಾರ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಆಗ ನಾನು ಆಸ್ಪತ್ರೆಯಲ್ಲಿ ಇದ್ದೆ. ಅದೇ ದಿನ ಪೊಲೀಸರು ನನ್ನನ್ನು ಆಸ್ಪತ್ರೆಯಲ್ಲಿ ವಿಚಾರಿಸಿರುತ್ತಾರೆ. ಅನಂತರದಲ್ಲಿ ನನ್ನನ್ನು ವಿಚಾರಣೆ ಮಾಡಿರುವ ನೆನಪು ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿದ ಸಮಯದಲ್ಲಿ ಏನೆಲ್ಲಾ ಬರೆದುಕೊಂಡಿರುತ್ತಾರೆ ಎಂದು ಈಗ ಹೇಳಲಾಗುವುದಿಲ್ಲ.

ಜಾಗದ ವಿಚಾರದಲ್ಲಿ ತಕರಾರು ಇರುವ ಕಾರಣ ಕೊಡಲಿಯಿಂದ ಹಲ್ಲೆ ಮಾಡಿ ಅವರ ವಿರುದ್ಧ ಪ್ರಕರಣ ದಾಖಲಿಸುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಿನಾಂಕ ಮತ್ತು ಸಮಯದಂದು ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿಲ್ಲದೆ ಅದರಿಂದ ಚಾಸಾ-1 ರವರು ರಕ್ತಗಾಯಗಳಿಗೆ ಒಳಗಾಗಿಲ್ಲದೇ ನಾನು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿಲ್ಲ

ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಬಿದ್ದಾಗ ಆದ ಪೆಟ್ಟನ್ನು ದುರಪಯೋಗಪಡಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಾದಿಸಿರುವ ಯಾವುದೇ ಘಟನೆ ಜರುಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**